# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.

ಸಿ.ಸಿ.ನಂ.**739/2017**
ಪಿ.ಡಬ್ಲೂಃ1

ಸಾಕ್ಷಿದಾರರ ಹೆಸರು -ಸಂಗನಬಸಪ್ಪ ತಳವಾರ

ತಂದೆಯ/ಗಂಡನ ಹೆಸರು - ಶಿವಪ್ಪ

ವಯಸ್ಸು - 55 ವರ್ಷ

ಉದ್ಯೋಗ - ಪಿ.ಎಸ್.ಐ. ಕಲಕೇರಿ ಪೊಲೀಸ ಠಾಣೆ,

ವಾಸಸ್ಥಳ - ಕಲಕೇರಿ

## ದಂಡ ಪ್ರಕ್ರೀಯಾ ಕಲಂ.299 ರಡಿಯಲ್ಲಿ ಸಾಕ್ಷಿದಾರರ ಹೇಳಿಕೆ.

ಸಾಕ್ಷಿಯನ್ನು ದಿನಾಂಕ **13.07.2026** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ : ಎ.ಪಿ.ಪಿ. ರವರಿಂದ

ನಾನು ದಿಃ26.08.2025 ರಿಂದ 16.02.2026 ವರೆಗೆ ಸಿ.ಬಿ. ಕ್ರೆಮ್ ಬ್ಯಾಂಚನಲ್ಲಿ ಸಿಂದಗಿ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಸಿ.ಸಿ.ನಂ.739/2017 ರಲ್ಲಿ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯವು ಉದ್ಘೋಷಣೆ ಹೊರಡಿಸಿದ್ದು, ನ್ಯಾಯಾಲಯದ ಆದೇಶದಂತೆ ದಿನಾಂಕಃ19.01.2026 ರಂದು ಮಧ್ಯಪ್ರದೇಶ ರಾಜ್ಯದ ದುಪಡಾ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಮತ್ತು ದುಪಡಾ ಗ್ರಾಮ ಪಂಚಾಯತಿನಲ್ಲಿ ವಿಚಾರಿಸಲಾಗಿ ಆರೋಪಿತರು ಸದರಿ ಗ್ರಾಮದಲ್ಲಿ ಇರುವುದಿಲ್ಲ ಎಂದು ಪಂಚರು ಹೇಳಿರುತ್ತಾರೆ. ಆ ಬಗ್ಗೆ ಪಂಚರ ಸಮಕ್ಷಮ ನಾನು ಆರೋಪಿತರ ಗ್ರಾಮದ ಬಸ್ ನಿಲ್ದಾಣದ ಗೋಡೆಗೆ ಮತ್ತು ದುಪಡಾ ಗ್ರಾಮದ ಪಂಚಾಯತಿಯ ಗೋಡೆಗೆ ಉದ್ಘೋಷಣೆ ನೋಟಿಸನ್ನು ಅಂಟಿಸಿರುತ್ತೇನೆ. ಈ ಬಗ್ಗೆ ಪಂಚನಾಮೆಯನ್ನು ಮಾಡಿರುತ್ತೇನೆ. ಈ ಬಗ್ಗೆ ನ್ಯಾಯಾಲಯಕ್ಕೆ ವರದಿ ಕೊಟ್ಟಿದ್ದೇನೆ. ಕಡಿಂಭಿಟಚಿಟಚಿಣುಂಟಿ ವಾರೆಂಟಗಳನ್ನು ನಿಪಿಃ1 ರಿಂದ 5 ಎಂದು, ಪಂಚನಾಮೆಗಳನ್ನು ನಿಪಿಃ6 ಮತ್ತು 7 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ6 ಎ ಮತ್ತು 7 ಎ ಎಂದು, ನಾಲ್ಕು ಪೋಟೋಗಳನ್ನು ನಿಪಿಃ8 ರಿಂದ 11 ಎಂದು, ವರದಿಯನ್ನು ನಿಪಿ.12 ಎಂದು, ಸಾಕ್ಷಿಯ ಸಹಿಯನ್ನು ನಿಪಿ.12 ಎ ಎಂದು ಗುರುತಿಸಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೆ.ಕೆ.ಸರಿ. ಅದೇ

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.
ಸಿಂದಗಿ